www.vijayadasaru.net

ಶ್ರೀಜಗನ್ನಾಥದಾಸರ ಕೃತಿ

# ಬಂಧನವ ಪರಿಹರಿಸೋ ಭವವಿದೂರ

## — ಒಂದು ವಿವೇಚನೆ —

— ಪಂ || ಶ್ರೀನಿವಾಸ. ಸು.ಮಠದ

ದಾಸಸಾಹಿತ್ಯದ ದ್ವಿತೀಯ ಘಟ್ಟದ ದಾಸರಲ್ಲಿ ಶ್ರೀ ವಿಜಯದಾಸರು, ಶ್ರೀ ಗೋಪಾಲ ದಾಸರು ಇವರ ತರುವಾಯ ಶ್ರೀಜಗನ್ನಾಥದಾಸರೇ ಪ್ರಮುಖರು. ಇವರು ಕನ್ನಡದಾಸ ಸಾಹಿತ್ಯವನ್ನು ಉಳಿಸಿ ಬೆಳೆಸಿದ ಮಹನೀಯರು. ದಾಸಸಾಹಿತ್ಯಕ್ಕೆ ಇವರ ಕೊಡುಗೆ ಅಪಾರ: ಶ್ರೀ ಹರಿಕಥಾಮೃತ ಸಾರ'ದಂತಹ ಮೇರುಕೃತಿಯನ್ನು ರಚಿಸಿ ದಾಸಸಾಹಿತ್ಯವನ್ನು ಶ್ರೀಮಂತಗೊಳಿಸಿದರು. ಪ್ರಸ್ತುತ ಪದ್ಯದಲ್ಲಿ ಸುಜೀವರ ಸಂಸಾರಬಂಧನವನ್ನು ಕಳೆದು ಮೋಕ್ಷಾದಿಪುರುಷಾರ್ಥಗಳನ್ನು ಕುರಣಿಸಬೇಕೆಂದು ಭಗವಂತನಲ್ಲಿ ಪ್ರಾರ್ಥಿಸಿದ್ದಾರೆ. ಇದರ ಚಿಕ್ಕ ವಿವೇಚನೆ ಇಲ್ಲಿದೆ.

**ಬಂಧನವ ಪರಿಹರಿಸೋ ಭವವಿದೂರ ।**
**ಕಂದರ್ಪಜನಕ ಕಾರುಣ್ಯದಲ್ಲಿ ಭಕ್ತರ ॥ ಪ ॥**

ಇಲ್ಲಿ ಭವವಿದೂರನಾದ, ನಿತ್ಯಮುಕ್ತನಾದ ಭಗವಂತನನ್ನು ಈ ಸಂಸಾರಬಂಧನದಿಂದ ನಮ್ಮನ್ನು ಪಾರು ಮಾಡಬೇಕೆಂದು ಶ್ರೀದಾಸರು ಕೇಳಿಕೊಂಡಿದ್ದಾರೆ. ಆ ಭಗವಂತನು ಕಾಮನಿಗೆ ತಂದೆಯಾಗಿದ್ದಾನೆ. ಅವನು ಮಾತ್ರ ಕರುಣೆತೋರಿ ಭಕ್ತರ ಸಂಸಾರ ಪಾಶವನ್ನು ತೆಗೆದುಹಾಕಲು ಸಮರ್ಥನಾಗಿದ್ದಾನೆ. ಹೀಗೆ ಶ್ರೀದಾಸರು ಭಗವಂತನನ್ನು ಪ್ರಾರ್ಥಿಸಲು ಕಾರಣವೂ ಇದೆ. ಭಗವಂತನು ಜೀವರನ್ನು ಸಂಸಾರದಲ್ಲಿ ಬಂಧಿಸುತ್ತಾನೆ ಹಾಗೂ ಅವರ ಸಾಧನ ಪೂರ್ತಿಯಾದಾಗ ಅವರನ್ನು ಭವಪಾಶದಿಂದ ಮೋಚನಗೊಳಿಸುತ್ತಾನೆ. ಇದನ್ನು ಶ್ರೀಮದ್ ವಿಷ್ಣುತತ್ವನಿರ್ಣಯದಲ್ಲಿ ಹೀಗೆ ತಿಳಿಸಿದ್ದಾರೆ.

**ಬಂಧಕೋ ಭವಪಾಶೇನ ಭವಪಾಶಾಚ್ಚ ಮೋಚಕಃ ॥**

ಶ್ರೀಮದ್ ಭಾಗವತದಲ್ಲಿ ಇದನ್ನೇ ತಿಳಿಸುವ ಪರಿಹೀಗಿದೆ.

**ನತೋಽಸ್ಮ್ಯಹಂ ತಚ್ಚರಣಂ ಸಮೀಯುಷಾಂ**
**ಭವಚ್ಛಿದಂ ಸ್ವಸ್ತ್ಯಯನಂ ಸುಮಂಗಲಮ್ ॥ (2-6-35)**

ಸಂಸಾರಬಂಧನವನ್ನು ಕಡಿದುಹಾಕುವ ಪರಮಮಂಗಲಕರವಾದ ಆ ಭಗವಂತನ ಪಾದಕಮಲಗಳಿಗೆ ಸಮಸ್ಕರಿಸುತ್ತೇನೆ.

ಇನ್ನೊಂದೆಡೆಗೆ ಹೀಗೆ ತಿಳಿಸಿದ್ದಾರೆ

**ಭಜಸ್ವ ಭಜನೀಯಾಂಘ್ರಿಂ ಅಭವಾಯ ಭವಚ್ಛಿದಮ್ ॥** (4 - 2 - 6)

ಸಂಸಾರ ಬಂಧನದಿಂದ ಬಿಡುಗಡೆ ಹೊಂದಲು ಆ ಭಗವಂತನನ್ನು ಭಜಿಸುವವನಾಗು. ಅವನೇ ಸಂಸಾರ ಬಂಧವನ್ನು ಕತ್ತರಿಸಿ ಹಾಕುತ್ತಾನೆ.

ಇನ್ನು ಯಾರು ಸ್ವತಃ ಜನನ ಮರಣರೂಪ ಸಂಸಾರದಿಂದ ವಿದೂರರೋ ಅವರು ಮಾತ್ರವೇ ಇನ್ನೊಬ್ಬರ ಸಂಸಾರವನ್ನು ಕಳೆಯಲು ಸಮರ್ಥರು ಎಂಬುದು ನಿರ್ವಿವಾದವೇ. ಆ ಭಗವಂತನನ್ನು ಶ್ರೀ ವಿಷ್ಣುಸಹಸ್ರನಾಮಸ್ತೋತ್ರದಲ್ಲಿ "ಜನ್ಮಮೃತ್ಯುಜರಾತಿಗಃ" ಎಂದಾಗಿ ಸ್ತೋತ್ರ ಮಾಡಿರುವುದನ್ನು ಗಮನಿಸಿದಾಗ, ಮತ್ತು ಮೇಲೆ ತಿಳಿಸಿದ ಪ್ರಮಾಣಗಳಿಂದ ಆ ಭಗವಂತನೇ - ಭವವಿದೂರನು. ಅವನು ಮಾತ್ರ ಭಕ್ತರ ಸಂಸಾರಬಂಧವನ್ನು ಕಳೆಯಬಲ್ಲವನು ಎಂಬುದು ಸಿದ್ಧವಾಗುತ್ತದೆ.

ಭಗವಂತನನ್ನು ಇಲ್ಲಿ "ಕಂದರ್ಪಜನಕ" ಎಂದಾಗಿ ಸ್ತೋತ್ರ ಮಾಡಿದ್ದಾರೆ.

ಕಂದರ್ಪಜನಕ ಎಂದರೆ ಕಾಮನ ತಂದೆ ಎಂದು ಅರ್ಥವು.

**ಕಂದರ್ಪೋದರ್ಪಕೋऽನಂಗಃ ಕಾಮಃ ಪಂಚಶರಸ್ಮರಃ ||** ಅಮರಕೋಶ

ಕಾಮನೇ ಪ್ರದ್ಯುಮ್ನನೆಂಬ ಹೆಸರಿನಿಂದ ಶ್ರೀರುಕ್ಮಿಣೀದೇವಿರಲ್ಲಿ ಜನ್ಮ ಪಡೆದಿದ್ದಾರೆ. ಆ ಪ್ರಯುಕ್ತ ಭಗವಂತನಿಗೆ 'ಕಂದರ್ಪಜನಕ' ಎಂದು ಹೇಳಿರುವುದು ಸಾರ್ಥಕವಾಗಿದೆ. ಭಗವಂತನು ಭಕ್ತರಲ್ಲಿ ಕರುಣೆತೋರಿ " ಏನಂಬಂಧಾನ್ಮೋಚಯಾಮಿ" ಎಂದು ಸಂಕಲ್ಪಿಸಿ ಅವನನ್ನು ಭವಪಾಶದಿಂದ ಭವಬಂಧನದಿಂದ ಪಾರು ಮಾಡುತ್ತಾನೆ ನಿಶ್ಚಿತವೇ.

**ದುಷ್ಟಜನರು ಬಲು ಕಷ್ಟಪಡಿಸುವದು ನಿನ**
**ಗೆಷ್ಟು ಉಸುರಲಿ ಕೇಳು ಜಿಷ್ಣುಸಖನೇ ।**
**ವೃಷ್ಣೀಶ ನೀ ದಯಾ ದೃಷ್ಟಿಯಿಂದಲಿ ಈಗ**
**ತುಷ್ಟನ್ನ ಮಾಡು ಸಂತುಷ್ಟಿಯಿಂದಲಿ ಬೇಗ ॥ 1 ॥**

ಈ ಸಂಸಾರದಲ್ಲಿ ದುಷ್ಟ ಜನರು ಸಜ್ಜನರನ್ನು ಪೀಡಿಸುತ್ತಾರೆ, ಕಷ್ಟಕೊಡುತ್ತಾರೆ. ಅರ್ಜುನನ-ಸಖನಾದ ಶ್ರೀ ಕೃಷ್ಣನೇ ಇದನ್ನು ನಾನೆಷ್ಟು ಹೇಳಿದರೂ ತೀರದು. ವೃಷ್ಣಿಕುಲಕ್ಕೆ ಸ್ವಾಮಿಯಾದ ಭಗವಂತನೇ ನೀನು ನನ್ನಲ್ಲಿ ದಯೆತೋರಿ ಸಂತುಷ್ಟಿಯಿಂದ, ನಾನು ಹರ್ಷದಿಂದ ಇರುವಂತೆ ಕರುಣಿಸು ಎಂಬುದಾಗಿ ಇಲ್ಲಿ ಶ್ರೀದಾಸರು ದೇವರಲ್ಲಿ ಕೇಳಿಕೊಂಡಿದ್ದಾರೆ.

"ದುರ್ಜನಸ್ಯವಿಶಿಷ್ಟತ್ವಂ ಪರೋಪದ್ರವಕಾರಣಮ್" ಎಂಬ ಸುಭಾಷಿತ ಉಕ್ತಿಯಂತೆ ದುರ್ಜನರು ಸಜ್ಜನರಿಗೆ ಉಪದ್ರವ, ಕಿರುಕುಳ ಕೊಡುತ್ತಾರೆ. ಪರರಿಗೆ ಕಷ್ಟಕೊಡುವುದರಿಂದ ಅವರು ಸಂತೋಷಪಡುತ್ತಾರೆ. ಇದೇ ಅವರ ವೈಶಿಷ್ಟ್ಯ.

ದುರ್ಜನರನ್ನು ಕುರಿತು ಶ್ರೀ ಪುರಂದರದಾಸರು "ಜಾಲಿಯ ಮರದಂತೆ ಧರೆಯೊಳು ದುರ್ಜನರು" ಪದ್ಯದಲ್ಲಿ ತುಂಬಾ ಮಾರ್ಮಿಕವಾಗಿ ಹೇಳಿದ್ದಾರೆ.

ತನ್ನಿಂದ ಉಪಕಾರ ತಟಕಾದರೂ ಇಲ್ಲ
ಬಿನ್ನಣ ಮಾತಿಗೆ ಕೊನೆ ಇಲ್ಲವು
ಅನ್ನಕ್ಕೆ ಸೇರಿದ ಕುನ್ನಿ ಮಾನವರಂತೆ-
ಇನ್ನಿವರ ಕಾರ್ಯವು ಪುರಂದರವಿಠಲ ॥

ಶ್ರೀ ಜಗನ್ನಾಥದಾಸರು ಭಗವಂತನಿಗೆ "ಜಿಷ್ಣುಸಖ" ನೆಂದು ಸಂಬೋಧನೆ ಮಾಡಿದ್ದಾರೆ. ಜಿಷ್ಣು ಎಂದರೆ ಅರ್ಜುನ. ಕೋಶದಲ್ಲಿ ಹೀಗೆ ತಿಳಿಸಿದ್ದಾರೆ

ಅರ್ಜುನಃ ಫಲ್ಗುನಃ ಪಾರ್ಥಃ ಕಿರೀಟೀ ಶ್ವೇತವಾಹನಃ ।

ಭೀಭತ್ಸುಃ ವಿಜಯೋ ಜಿಷ್ಣುಃ ಸವ್ಯಸಾಚೀ ಧನಂಜಯಃ ॥

ಇದು ಶ್ರೀಮನ್‌ಮಹಾಭಾರತದಲ್ಲೂ ಉಕ್ತವಾಗಿದೆ. ಅರ್ಜುನ ಹೆಸರುಗಳಲ್ಲಿ "ಜಿಷ್ಣು" ಎಂಬುದೂ ಒಂದಾಗಿದೆ. ಅರ್ಜುನನಿಗೆ ಸಖನಾದ ಭಗವಂತನಿಗೆ "ಜಿಷ್ಣುಸಖ" ಎಂದು ಸಂಬೋಧಿಸಿರುವುದು ಸಾರ್ಥಕವೇ.

ಶ್ರೀಮದ್‌ಭಾಗವತದಲ್ಲಿ ಉದ್ಧವ ಹೇಳುತ್ತಾನೆ.

ನಾರಾಯಣಂ ನರಸಖಿಂ ಶರಣಂ ಪ್ರಪದ್ಯೇ ॥ (11-7-18)

ನರ ಎಂದರೆ ಅರ್ಜುನ. ಅರ್ಜುನನಿಗೆ ಸಖನಾದ ಶ್ರೀಮನ್ನಾರಾಯಣನನ್ನು ಶರಣುಹೊಂದುತ್ತೇನೆ ಎಂಬುದಾಗಿ ಹೇಳಿದ್ದಾನೆ.

ಶ್ರೀದಾಮೋದರ ಸ್ತೋತ್ರದಲ್ಲಿ ಭಗವಂತನಿಗೆ "ಪಾರ್ಥಸಖೇತ್ವಂ"ಎಂದಾಗಿ ವರ್ಣಿಸಿರುವುದು ಗಮನಾರ್ಹವಾಗಿದೆ. ಭಗವಂತನು ಶ್ರೀ ಕೃಷ್ಣರೂಪದಿಂದ ವೃಷ್ಣಿಗಳಲ್ಲಿ ಅವತರಿಸಿ "ವೃಷ್ಣೀಶ"ನೆಂದು ಹೆಸರು ಪಡೆದಿದ್ದಾನೆ.

ವೃಷ್ಣಯೋ ವಸುದೇವಾದ್ಯಾಃ ದೇವಕ್ಯಾದ್ಯಾಃ ಯದುಸ್ತ್ರಿಯಃ ।
ಸರ್ವೇ ವೈ ದೇವತಾ ಪ್ರಾಯಾಃ ॥ ಶ್ರೀ ಮದ್‌ಭಾಗವತ (10 - 1 - 62)

ವಸುದೇವಾದಿಗಳೆಲ್ಲರೂ ವೃಷ್ಣಿಗಳೆಂದು ಕರೆಸಿಕೊಳ್ಳುತ್ತಾರೆ. ಶ್ರೀಕೃಷ್ಣನು ವಸುದೇವನನ್ನು ನಿಮಿತ್ತ ಮಾಡಿಕೊಂಡು ಅವತರಿಸಿರುವುದರಿಂದ ಹಾಗೂ ಅವರೆಲ್ಲರಿಗೂ ಸ್ವಾಮಿಯಾದ ಪ್ರಯುಕ್ತ ಶ್ರೀ ಕೃಷ್ಣನಿಗೆ "ವೃಷ್ಣೀಶ" ಎಂಬ ನಾಮವು ಸಾರ್ಥಕವಾಗಿದೆ.

ಹೇ ವೃಷ್ಣೀಶ ! ನೀನು ನಮ್ಮನ್ನು ದಯಾದೃಷ್ಟಿಯಿಂದ ನೋಡಿದ್ದಾದರೆ ನಮ್ಮ ತಾಪತ್ರಯಗಳೆಲ್ಲ ನಾಶವಾಗಿ ಸಂತೋಷವು ಲಭಿಸುತ್ತದೆ. ಶಾಶ್ವತ ಸುಖರೂಪವಾದ ಮೋಕ್ಷವೂ ಕೂಡ ದೊರಕುವುದರಲ್ಲಿ ಸಂದೇಹವಿಲ್ಲ

ಜಿತಂತೇ ಸ್ತೋತ್ರದಲ್ಲಿ ಬ್ರಹ್ಮದೇವರು ಹೀಗೆ ಸ್ತೋತ್ರಮಾಡಿದ್ದಾರೆ.

"ಕರುಣಾಪೂರ್ಣದೃಷ್ಟಿಭ್ಯಾಂ ದೀನಂ ಮಾಂ ಅವಲೋಕಯ" (ಪಂಚರಾತ್ರಾಗಮ) ಕರುಣೆಯಿಂದ ಕೂಡಿದ ದೃಷ್ಟಿಯಿಂದ ದೀನನಾದ (ದುಃಖಿತನಾದ) ನನ್ನನ್ನು ನೋಡು. ನನ್ನ ದುಃಖವೆಲ್ಲ ಇದರಿಂದ ನಾಶವಾಗುತ್ತದೆ.

ಹಯಮುಖನೆ ನಿನ್ನವರ ದಯದಿಂದ ಸಲಹುವದು
ವಯುನಗಮ್ಯನೆ ಲೋಕತ್ರಯ ನಿರುತ ।
ಪ್ರಿಯನೆಂದು ನಿನಗೆ ನಾ ದೈನ್ಯದಲಿ ಮೊರೆಯಿಡುವೆ
ದಯ ಮಾಡುವುದು ನೀನು ಜಯ ಪ್ರದಾಯಕನಾಗಿ ॥ 2 ॥

ಹಯಗ್ರೀವ ರೂಪವನ್ನು ಧರಿಸಿದ ಭಗವಂತನೇ ! ನೀನು ನಿನ್ನವರೆನಿಸಿದ ಭಕ್ತರನ್ನು ಕರುಣೆಯಿಂದ ರಕ್ಷಿಸು. ನೀನು ಜ್ಞಾನಗಮ್ಯನಾಗಿರುವಿ. ಮೂರು (ಉಪಲಕ್ಷಣತಯಾ ಹದಿನಾಲ್ಕು) ಲೋಕಗಳಿಗೆ ನೀನು ಪ್ರೀಯನಾಗಿರುವಿ. ಆದ್ದರಿಂದ ನಾನು ನಿನಗೆ ದೈನ್ಯದಿಂದ ಮೋರೆಹೊಕ್ಕಿರುವೆ. ನನ್ನ ಮೇಲೆ ದಯೆತೋರಿ ನನ್ನ ಜೀವನದಲ್ಲಿ ಜಯವನ್ನು ತಂದುಕೊಡುವವನಾಗು.

**ವೇದಾನ್‌ಯುಗಾಂತೇ ತಮಸಾ ತಿರಸ್ಕೃತಾನ್ ರಸಾತಲಾದ್ಯೋ ನೃತುರಂಗ ವಿಗ್ರಹ : ।**
**ಪ್ರತ್ಯಾದದೇ ವೈ ಕವಯೇಽಭಿಯಾಚತೇ ತಸ್ಮೈ ನಮಸ್ತೇಽವಿತಥೇ ಹಿತಾಯ ಇತಿ ॥**

ಶ್ರೀಮದ್‌ಭಾಗವತ – (5 – 18 – 6)

ಶ್ರೀ ಭಗವಂತನು ಹಯಗ್ರೀವ ರೂಪವನ್ನು ಧರಿಸಿರುವ ಹಿನ್ನೆಲೆ ಹೀಗಿದೆ. ಹಿಂದೆ ವೇದಗಳನ್ನು ಕದ್ದೊಯ್ದ ಮಧುಕೈಟಭರೆಂಬ ದೈತ್ಯರನ್ನು ಭಗವಂತನು ಹಯಗ್ರೀವರೂಪವನ್ನು ಧರಿಸಿ, ಅವರನ್ನು ಸಂಹಾರ ಮಾಡಿ ಬ್ರಹ್ಮದೇವರಿಗೆ ವೇದಗಳನ್ನು ತಂದುಕೊಟ್ಟನು. ಇದು ಶ್ರೀಮದ್‌ಮಹಾಭಾರತ ಶಾಂತಿಪರ್ವದ 347 ನೆಯ ಅಧ್ಯಾಯದಲ್ಲಿಯೂ ಉಕ್ತವಾಗಿದೆ.

ಭಗವಂತನು ತನ್ನ ಭಕ್ತರನ್ನು ಸರ್ವಕಾಲಗಳಲ್ಲಿ ರಕ್ಷಿಸುತ್ತಾನೆ. ಇದರಿಂದ ಅವನಿಗೆ- 'ಭಕ್ತವತ್ಸಲ'ನೆಂಬ ಬಿರುದು ಸಾರ್ಥಕವಾಗಿ ಬಂದಿದೆ. ಭಗವಂತನು "ವಯುನಗಮ್ಯ" ಎಂದರೆ ಜ್ಞಾನಗಮ್ಯನಾಗಿದ್ದಾನೆ. ಶ್ರೀಭಗವದ್ಗೀತೆಯಲ್ಲಿ ಇದನ್ನು ಹೀಗೆ ತಿಳಿಸಲಾಗಿದೆ.

**ಜ್ಞಾನಂ ಜ್ಞೇಯಂ ಜ್ಞಾನಗಮ್ಯಂ ಹೃದಿಸರ್ವಸ್ಯ ವಿಷ್ಠಿತಮ್ ॥** (13 – 18)

ಭಗವಂತನು ಪ್ರಕಾಶರೂಪನು, ಜ್ಞಾನದಿಂದ ಹೊಂದಲು ಯೋಗ್ಯನಾಗಿದ್ದಾನೆ. ಸಮಸ್ತ ಪ್ರಾಣಿಗಳ ಹೃದಯದಲ್ಲಿ ನಿಯಾಮಕನಾಗಿ ಇರುತ್ತಾನೆ. ಹದಿನಾಲ್ಕು ಲೋಕಗಳಲ್ಲಿರುವ ಪ್ರಾಣಿಗಳಿಗೆ ಅತಿಪ್ರಿಯನಾಗಿದ್ದಾನೆ. "ಪುತ್ರಾತ್ ಪ್ರೇಯಃ ವಿತ್ತಾತ್‌ಪ್ರೇಯಃ ಸರ್ವಸ್ಮಾತ್ ಪ್ರೇಯಃ" ಇತ್ಯಾದಿ ಶ್ರುತಿಯಲ್ಲಿ ತಿಳಿಸಿದಂತೆ ಭಗವಂತ ಎಲ್ಲರಿಗಿಂತ ಪ್ರಿಯ. ಇಂಥ ಭಗವಂತನಿಗೆ ನಾವು ಮೊರೆ ಹೋಗಬೇಕು. ಅವನು ನಮ್ಮನ್ನು ಈ ಸಂಸಾರ ಸಾಗರದಿಂದ ಪಾರುಮಾಡುತ್ತಾನೆ. ನಿಶ್ಚಿತ, ಭಗವಂತನಲ್ಲಿ ಹೀಗೆಪ್ರಾರ್ಥನೆ ಸಲ್ಲಿಸಬೇಕು.

**ಪಾಹಿ ಪಾಹಿ ಜಗನ್ನಾಥ ಕೃಪಯಾ ಭಕ್ತವತ್ಸಲ ।**
**ಅನಾಥೋಽಹಮಧನ್ಯೋಽಹಮಕೃತಾರ್ಥೋಽಹ್ಯಕಿಂಚನಃ ॥** ಪಂಚರಾತ್ರಾಗಮ

ಜಗದೊಡೆಯನಾದ ಭಗವಂತನೇ ದಯೆಯಿಂದ ನನ್ನನ್ನು ಸಲಹು. ನನ್ನವರು ಯಾರೂ ಇಲ್ಲ ನೀನೇ ಗತಿ. ಏನನ್ನೂ ಸಾಧಿಸದೇದರಿದ್ರನಾಗಿದ್ದೇನೆ. ನನ್ನ ಮೇಲೆ ದಯ ತೋರಿಸು.

ಕುರುಕ್ಷೇತ್ರಯುದ್ಧದಲ್ಲಿ ನೀನು ಅರ್ಜುನನಿಗೆ ಸಾರಥಿಯಾಗಿ ನಿಂತು ಜಯವನ್ನು ಸಂಪಾದಿಸಿ ಕೊಟ್ಟಿರುವಿ. ಹಾಗೆಯೇ ನನಗೂ ಕೂಡ ನನ್ನ ಜೀವನದಲ್ಲಿ ನೀನು ಜಯವನ್ನು ತಂದುಕೊಡುವವನಾಗು.

**ವೀತಶೋಕನೆ ಎನ್ನ ಮಾತ ಲಾಲಿಸಿ ನಿನ್ನ ದೂತರನು ಸಲಹುವದು ಪ್ರೀತಿಯಿಂದ ।**
**ದಾತ ಶ್ರೀ ಜಗನ್ನಾಥ ವಿಠ್ಠಲ ನಿನ್ನ ನಾ ತುತಿಸ ಬಲ್ಲೆನೆ ವಿಧಾತ ಮುಖವಂದ್ಯನೇ ॥ 3 ॥**

ಚಿಂತಾಸಂತಾಪಾದಿ ಶೋಕರಹಿತನಾದ ಭಗವಂತನೇ ! ನನ್ನ ಮಾತನ್ನು ಲಾಲಿಸಿ ನಿನ್ನ

ಸೇವಕನಾದ ನನ್ನನ್ನು ಪ್ರೀತಿಯಿಂದ ರಕ್ಷಿಸು. ಸಮಸ್ತ- ಪ್ರಪಂಚಕ್ಕೆ ಸ್ವಾಮಿಯಾಗಿ ಬೇಡಿದ್ದನ್ನು ಕೊಡುವ ಜಗನ್ನಾಥ ವಿಠ್ಠಲನೇ ಬ್ರಹ್ಮಾದಿ ಸಮಸ್ತ ದೇವತಾ ಸಮೂಹದಿಂದ ವಂದ್ಯನಾಗಿರುವ ನಿನ್ನನ್ನು ಸ್ತೋತ್ರ ಮಾಡಲು ಅಸಮರ್ಥನಾಗಿದ್ದೇನೆ.

ಭಗವಂತನು ವೀತಶೋಕ ಅಂದರೆ ಶೋಕರಹಿತನಾಗಿದ್ದಾನೆ. ಶ್ರೀಮತೆ ಟೀಕಾಕೃತ್ಪಾದರು ಭಗವಂತನನ್ನು ಕುರಿತು ಹೀಗೆ ಸ್ತೋತ್ರ ಮಾಡಿದ್ದಾರೆ.

**ಶುದ್ಧಾನಂದೋರುಸಂವಿದ್ದ್ಯುತಿಬಲಬಹುಲೌದಾರ್ಯವೀರ್ಯಾದಿದೇಹಂ ।**
**ಚಿಂತಾಸಂತಾಪಲೇಪೋದ್ಭವ ಮೃತಿ ಮುಖರಾಶೇಷ ದೋಷಾತಿದೂರಮ್ ॥** –ತತ್ತ್ವ ಪ್ರಕಾಶಿಕಾ

ಶುದ್ಧವಾದ ಆನಂದ, ಪೂರ್ಣವಾದ ಜ್ಞಾನ, ಕಾಂತಿ, ಬಲ, ಬಹಳವಾದ ಔದಾರ್ಯ, ವೀರ್ಯ, ಇತ್ಯಾದಿ. ಗುಣಮಯವಾದ ದೇಹವಿರುವ ಭಗವಂತನು ಚಿಂತಾ,(ಸಂತಾಪ) ಶೋಕ, ಪುಣ್ಯಪಾಪಲೇಪ, ಜನನ, ಮರಣ ಇತ್ಯಾದಿ ಸರ್ವದೋಷಗಳಿಂದ ದೂರನಾಗಿದ್ದಾನೆ.

ಭಗವಂತನು ತನ್ನ ದೂತರ (ಸೇವಕರ) ಶೋಕವನ್ನು ಪರಿಹರಿಸುತ್ತಾನೆಂದು ಶ್ರೀಮದ್ ಭಾಗವತದಲ್ಲಿ ತಿಳಿಸಿರುವುದು ಗಮನಾರ್ಹವಾಗಿದೆ.

ಭೃತ್ಯಾರ್ತಿಹಂ ಪ್ರಣತಪಾಲ ಭವಾಬ್ಧಿಪೋತಂ
ವಂದಾಮಹೇ ಪುರುಷ ತೇ ಚರಣಾರವಿಂದಮ್ ॥ (11 – 5 –33) .

ಹಾಗೂ ಭಕ್ತರು ಬೇಡಿದುದನ್ನು ಕೊಟ್ಟು ರಕ್ಷಿಸುತ್ತಾನೆ. ಶ್ರೀಮದ್ ಭಾಗವತದಲ್ಲಿ – ಗೋಪಿಕಾಸ್ತ್ರೀಯರ

ಪ್ರಣತಕಾಮದಂ ಪದ್ಮಜಾರ್ಚಿತಂ ಧರಣಿಮಂಡನ ಧ್ಯೇಯಮಾಪದಿ ॥
ಈ ಮಾತಿನಿಂದ ಮೇಲಿನ ವಿಷಯವು ಖಚಿತವಾಗುತ್ತದೆ.

ಇಂಥ ಜಗನ್ನಾಥವಿಠ್ಠಲನನ್ನು ನಾನು ಸ್ತೋತ್ರಮಾಡಲು ಅಸಮರ್ಥನಾಗಿದ್ದೇನೆ. ಸಾವಿರ ತಲೆಗಳುಳ್ಳ ಶೇಷದೇವರೇ ಆ ಭಗವಂತನನ್ನು ಸಾಕಲ್ಯೇನ ಸ್ತೋತ್ರಮಾಡಲು ಅಸಮರ್ಥ(ಅಶಕ್ತ)ನಾಗಿರುವಾಗ ನಾನು ಭಗವಂತನನ್ನು ಸ್ತೋತ್ರಮಾಡುವುದು ಅಶಕ್ಯ ವೆಂಬುದು ಕೈಮುತ್ಯನ್ಯಾಯದಿಂದ ಸಿದ್ಧವಾಗುತ್ತದೆ. ಕೊನೆಯದಾಗಿ ಆ ಭಗವಂತನು ಬ್ರಹ್ಮಾದಿದೇವತೆಗಳಿಂದ ವಂದ್ಯನಾಗಿದ್ದಾನೆ. ಶ್ರೀಮದ್‌ದ್ವಾದಶಸ್ತೋತ್ರದಲ್ಲಿ ಶ್ರೀಮದಾನಂದ ತೀರ್ಥಭಗವತ್ಪಾದರು ತಿಳಿಸಿರುವ ಮಾತನ್ನು ಇಲ್ಲಿ ನೆನಪಿಸಿಕೊಳ್ಳಬೇಕು.

ಆನಂದಸ್ಯ ಪದಂ ವಂದೇ ಬ್ರಹ್ಮೇಂದ್ರಾದ್ಯಭಿವಂದಿತಮ್ ।

ಬ್ರಹ್ಮ, ರುದ್ರ, ಇಂದ್ರ ಇವರೇ ಮೊದಲಾದ ಎಲ್ಲ ದೇವತೆಗಳಿಂದ ವಂದ್ಯನಾದ ಆನಂದರೂಪೀ ಭಗವಂತನನ್ನು ನಮಸ್ಕರಿಸುತ್ತೇನೆ.

ಇಂಥ ಭಗವಂತನು ನಮ್ಮನ್ನು ಜನನ- ಮರಣರೂಪ, ಸಂಸಾರ ಬಂಧನದಿಂದ ಬಿಡುಗಡೆ ಮಾಡಿ ಮೋಕ್ಷಾದಿ ಪುರುಷಾರ್ಥಗಳನ್ನು ಕೊಡಲಿ ಎಂಬುದಾಗಿ ಶ್ರೀಜಗನ್ನಾಥದಾಸರು ಕೇಳಿಕೊಂಡಿದ್ದಾರೆ. ಅವರ ಈ ಉಪಕಾರಕ್ಕೆ ನಾವೇನು ಕೊಡಬಲ್ಲೆವು.

"ಭೂಯಿಷ್ಠಾಂತೇ ನಮ ಉಕ್ತಿಂ ವಿಧೇಮ" ॥ ◆

Courtesy:Haridasavahini